ಮೂಲ ದಾವಾ ಸಂಖ್ಯೆ 262/2014 ಡಿ ಡಬ್ಲ್ಯೂ 2 ನಾಗರಾಜ್ ಎಂ ಬಿನ್ ಪೆದ್ದಸುಬ್ಬರಾಯಡು ಎ ಎಂ

(ದಿನಾಂಕ 10-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನಾನು ಹೆರ್ ಕಟಿಂಗ್ ಸ್ಯಲೂನನ್ನು ಹೊಂದಿರುತ್ತೇನೆ. ನಾನು ರಿಯಲ್ ಎಸ್ಟೇಟ್ ಏಜೆಂಟಾಗಿಯೂ ಕೆಲಸ ಮಾಡುತ್ತೇನೆಂದರೆ ಸರಿ. ಬಹಳಷ್ಟು ಜನರಿಗೆ ಆಸ್ತಿಯನ್ನು ಕೊಡಿಸುವ ಕೆಲಸ ಮಾಡುತ್ತೇನೆಂದರೆ ಸರಿ. ನನಗೆ ದಾವಾಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ವಾದಿ ಮತ್ತು 1 ನೇ ಪ್ರತಿವಾದಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯು ಪ್ರತಿವಾದಿಗಳು ವಿರುದ್ದ ಏನು ಪ್ರಕರಣ ದಾಖಲುಪಡಿಸಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿ.

ನಾನು ಈ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ನನ್ನ ಪ್ರತಿವಾದ ಪತ್ರಕ್ಕೆ ನಾನೇ ವಿಚಾರ ಮಾಡಿಕೊಂಡು ಹಾಕಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಬಹಳ ದಿನಗಳಾಗಿರುತ್ತವೆ.

ದಾವಾಸ್ತಿಗಳ ಸರ್ವೆ ಸಂಖ್ಯೆಃ 7 ಬಿ/3 ರಲ್ಲಿ 1 ಎಕರೆ 87 ಸೆಂಟ್ಸ ಇರುತ್ತದೆ. ನನಗೆ ಈ ಒಂದು ಸರ್ವೆ ನಂಬರನ್ನು ಬಿಟ್ಟು ದಾವಾಸ್ತಿಯ ಇನ್ನೊಂದು ಸರ್ವೆ ಸಂಖ್ಯೆಯ ಬಗ್ಗೆ ಮಾಹಿತಿ ಇರುವುದಿಲ್ಲವೆಂದರೆ ಸರಿ, ಸಾಕ್ಷಿ ಮುಂದುವರೆದು ಇನ್ನೊಂದು ಆಸ್ತಿಯನ್ನು ಯಾರೋ ತೆಗೆದುಕೊಂಡಿರುತ್ತಾರೆಂದು ಹೇಳುತ್ತಿದ್ದರು ಆದರೆ ನನಗೆ ಮಾಹಿತಿ ಇರುವುದಿಲ್ಲ. ಇನ್ನೊಂದು ಸರ್ವೆ ಸಂಖ್ಯೆಯ ದಾವಾಸ್ತಿಯು ಯಾರ ಹೆಸರಿನಲ್ಲಿತ್ತು,

ಯಾರ ಹೆಸರಿನಲ್ಲಿದೆ, ಯಾರು ಸ್ವಾಧೀನದಲ್ಲಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿ. ನಾನು ಇನ್ನೊಂದು ದಾವಾ ಸ್ವತ್ತಿನ ಸರ್ವೆ ಸಂಖ್ಯೆಯ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯ ಸಾಕ್ಷ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವುದೇ ಮಾಹಿತಿಯನ್ನು ಬರೆಸಿರುವುದಿಲ್ಲ.

ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ಯಾರು ಮಾಹಿತಿಯನ್ನು ಕೊಟ್ಟಿರುತ್ತಾರೆಂದು ಬಹಳ ವರ್ಷಗಳಾದ ಕಾರಣ ನನಗೆ ಹೇಳಲು ನೆನಪಿರುವುದಿಲ್ಲ. ಸರ್ವೆ ನಂ. 7 ಬಿ/3 ಒಟ್ಟು 3 ಎಕರೆ 75 ಸೆಂಟ್ಸ ಆಸ್ತಿ ಇದ್ದ ಬಗ್ಗೆ ನನಗೆ ಮಾಹಿತಿ ಇತ್ತು. ನಾನು ಈ ಸರ್ವೆ ಸಂಖ್ಯೆ ಆಸ್ತಿಯನ್ನು ಹೊಸಪೇಟೆಯ ಪ್ರವೀಣ್ ಪಾಟೀಲ್ ರವರಿಂದ ಖರೀದಿ ಮಾಡಿರುತ್ತೇನೆ.

ಖರೀದಿ ಪೂರ್ವದಲ್ಲಿ ಸಾಮಾನ್ಯವಾಗಿ ದಾಖಲಾತಿಗಳನ್ನು ಪರಿಶೀಲಿಸಲಾಗುತ್ತದೆಂದರೆ ಸರಿ. ನಾನು ಪ್ರವೀಣ್ ಪಾಟೀಲ್ ರವರ ಹೆಸರಿನಲ್ಲಿ ಸರ್ವೆ ನಂ.7 ಬಿ/3 ರ ಸ್ವತ್ತು ಇರುವಂತಹ ಇಸಿ, ಖರೀದಿಪತ್ರ ಮತ್ತು ಪಹಣಿ ದಾಖಲಾತಿಗಳನ್ನು ನೋಡಿರುತ್ತೇನೆ. ಈ ಸ್ವತ್ತು ಮೂಲತಃ ಬಸವನಗೌಡರವರ ಹೆಸರಿನಲ್ಲಿರುವ ಬಗ್ಗೆ ದಾಖಲಾತಿಗಳನ್ನು ನೋಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಬಸವನಗೌಡರಿಗೆ ಈ ಆಸ್ತಿಯು ಅವರ ಅಣ್ಣ ತಮ್ಮಂದಿರಿಂದ ಪಾಲುವಿಭಾಗದಲ್ಲಿ ಬಂದತಹ ಆಸ್ತಿಯಾಗಿರುತ್ತದೆಂದು ನನಗೆ ಮಾಹಿತಿ ಇರುತ್ತದೆ. 1969 ನೇ ಸಾಲಿನಲ್ಲಿ ವಾದಿ ಗಂಡ ಮತ್ತು ಪ್ರತಿವಾದಿಯ ಗಂಡ ನೊಂದಾಯಿತ ಕ್ರಯಪತ್ರದ ಮೂಲಕ ದಾವಾ ಎರಡು ಸರ್ವೆ ನಂಬರಿನ ಸ್ವತ್ತುಗಳನ್ನು ಖರೀದಿಸಿದ್ದರು

ಮೂಲ ದಾವಾ ಸಂಖ್ಯೆ 262/2014 ಡಿ ಡಬ್ಲ್ಯೂ 2 ನಾಗರಾಜ್ ಎಂ ಬಿನ್
ಪೆದ್ದಸುಬ್ಬರಾಯಡು ಎ ಎಂ

ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಮೂಲತಃ ದಾವಾ ಸ್ವತ್ತುಳು ಯಾರಿಗೆ ಸೇರಿರುತ್ತವೆಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 7 ಬಿ/3 ಸ್ವತ್ತಿನ ದಕ್ಷಿಣಕ್ಕೆ ನಾನು ಆಸ್ತಿಯನ್ನು ಖರೀದಿಸಿರುತ್ತೇನೆ. ದಕ್ಷಿಣ ಭಾಗಕ್ಕೆ ಆಸ್ತಿಯನ್ನು ಖರೀದಿಸಿರುವ ಬಗ್ಗೆ ನಾನು ಕ್ರಯಪತ್ರದಲ್ಲಿ ಬರೆಸಿರುವುದಿಲ್ಲ ನಾನು ಖರೀದಿಸಿದಂತಹ ಆಸ್ತಿಯ ಚಕ್ಕುಬಂದಿ ಪೂಃ ಬೇರೆಯವರ ಹೊಲವಿದ್ದು ಯಾರ ಹೊಲ ಎಂದು ನನಗೆ ಗೊತ್ತಿರುವುದಿಲ್ಲ, ಪಃ ಶಿವಯೋಗಿರವರ ಹೊಲ, ಉಃ ಯಾರ ಹೊಲ ಇದೆ ಎಂದು ಗೊತ್ತಿರುವುದಿಲ್ಲ, ದಃ ರಸ್ತೆ ಇರುತ್ತದೆ. ನಾನು ಈ ಸ್ವತ್ತನ್ನು ನೋಡಿರುವುದಿಲ್ಲವೆಂದರೆ ಸರಿಯಲ್ಲ. ಕಾರಣ ನನಗೆ ಚಕ್ಕುಬಂದಿ ಗೊತ್ತಿರುವುದಿಲ್ಲವೆಂದರೆ ಸರಿಯಲ್ಲ. ನಾನು ಖರೀದಿಸಿದ ನಂತರ ದಾವಾ ಸ್ವತ್ತಿನಲ್ಲಿ ಭಿತ್ತನೆಯನ್ನು ಮಾಡಿರುವುದಿಲ್ಲ. ನಾನಾಗಲೀ, ಪ್ರವೀಣ್ ಪಾಟೀಲ್ ಆಗಲೀ, ಪಿ ಜೆ ನಾಗರಾಜ್ ಆಗಲೀ, ಶಿವಯೋಗಿರವರಾಗಲೀ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುವುದಿಲ್ಲವೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಶಿವಯೋಗಿರವರು ಇರುವುದಾಗಿ ಹೇಳುತ್ತಾರೆ. ಶಿವಯೋಗಿರವರು ದಾವಾ ಸ್ವತ್ತಿನಲ್ಲಿ ಸ್ವಾಧೀನತೆಯಲ್ಲಿದ್ದು ಮೆಕ್ಕೇಜೋಳವನ್ನು ಭಿತ್ತನೆ ಮಾಡಿರುತ್ತಾರೆ.

ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೇಳಿದರು, ನೀಡಲಾಯಿತು.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ